


# ಸಾವಯುವ ಕೃಷಿಗೆ ಸಾವಯುವ ದ್ರಾವಣ!



ಸಂದೀಪ್ ಮಂಜುನಾಥ್
ಎಂ.ಎಸ್ಸಿ.ಕೃಷಿ, ಹುಣಸೂರು

ಸ್ವದೇಶಿ ಚಿಂತನೆ, ಸಾವಯವ ಕೃಷಿ, ಸರಳ ಜೀವನ ಪದ್ಧತಿ ಹೀಗೆ ಹತ್ತು ಹಲವು ವಿಚಾರಗಳನ್ನು ಜನರಿಗೆ ಮುಟ್ಟಿಸುವಲ್ಲಿ ತನ್ನದೇ ಛಾಪು ಮೂಡಿಸಿರುವ ಶ್ರೀಯುತ ಮಲ್ಲಿನಾಥ ಹೇಮಾಡಿಯವರು ಮೂಲತಹ ಗುಲ್ಬರ್ಗದವರು. ಪಿಯುಸಿ ನಂತರ ಇಂಜಿನಿಯರಿಂಗ್ ಸೇರಬೇಕೆಂಬ ಬಯಕೆ ಇದ್ದರೂ ತಂದೆ ರಾಚಣ್ಣ ಹೇಮಾಡಿಯವರ ಸಲಹೆಯಂತೆ ರಾಯಚೂರಿನಲ್ಲಿ ಬಿಎಸ್ಸಿ ಕೃಷಿ ಪದವಿಗೆ ಸೇರಿಕೊಳ್ಳುತ್ತಾರೆ. ಅದೇಕೋ ಏನೋ ಜೀವಶಾಸ್ತ್ರದಲ್ಲಿ ಹೆಚ್ಚಾಗಿ ಆಸಕ್ತಿ ಮೂಡುತ್ತಿರಲಿಲ್ಲ. ಪದವಿ ವ್ಯಾಸಂಗ ಮಾಡುತ್ತಿರುವಾಗ ಡಾ। ಪಿಡಬ್ಲ್ಯೂ ಬಾಸರಕರ ಎಂಬ ಅಧ್ಯಾಪಕರಿಂದ ರಾಜೀವ್ ದೀಕ್ಷಿತ್ ಅವರ ಪರಿಚಯವಾಗುತ್ತದೆ. ರಾಜೀವ್ ದೀಕ್ಷಿತ್ ಅವರು ಮಲ್ಲಿನಾಥ್ ಅವರ ಮೇಲೆ ಎಷ್ಟರ ಮಟ್ಟಿಗೆ ಪ್ರಭಾವ ಬೀರಿದ್ದರೆಂದರೆ ಕಾಲೇಜಿನ ಒಂದು ಕಾರ್ಯಕ್ರಮಕ್ಕೆ ಸ್ವತಃ ತಾವೇ ರಾಜೀವ್ ದೀಕ್ಷಿತರನ್ನು ಮುಖ್ಯ ಅತಿಥಿಗಳಾಗಿ ಆಹ್ವಾನಿಸಿದ್ದರು. ರಾಜೀವ್ ದೀಕ್ಷಿತರ ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಜೀವನದಲ್ಲಿ ಮಹತ್ತರ ತಿರುವು ಪಡೆದುಕೊಂಡಿತು. ವೈಯಕ್ತಿಕವಾಗಿ ರಾಜೀವ್ ದೀಕ್ಷಿತರ ಜೊತೆ ಚರ್ಚೆಗಳನ್ನು ಮಾಡುವ ಅವಕಾಶ ಮಲ್ಲಿನಾಥರಿಗೆ ದೊರೆಯುತ್ತದೆ. ಇದರೊಟ್ಟಿಗೆ ಭಾರತೀಯ ಇತಿಹಾಸ, ಜ್ಞಾನ ಪರಂಪರೆ, ಆಯುರ್ವೇದ, ಸ್ವದೇಶಿ ಚಿಂತನೆ ಬೀರುವ ಪುಸ್ತಕಗಳನ್ನು ಓದಲು ಪ್ರಾರಂಭಿಸಿದರು. ಇವೆಲ್ಲದರ ಫಲವಾಗಿ ಮಲ್ಲಿನಾಥರ ಮನಸ್ಥಿತಿ ಯಾವ ಮಟ್ಟ ಮುಟ್ಟಿತೆಂದರೆ, ಪದವಿಯನಂತರ ಯಾವುದೇ ಕಾರಣಕ್ಕೂ ಬಹುರಾಷ್ಟ್ರೀಯ ಕಂಪನಿಯಲ್ಲಿ ಉದ್ಯೋಗ ಮಾಡುವುದಿಲ್ಲ ಎಂದು ನಿರ್ಧರಿಸಿದರು.




ಬಿಎಸ್ಸಿ ಕೃಷಿ ನಂತರ ಎಂಬಿಎ ಮಾಡುವ ಹಂಬಲವಾಯಿತು. ಅದರಂತೆ ಗುಲ್ಬರ್ಗದ ಪ್ರತಿಷ್ಠಿತ ಕಾಲೇಜಿನಲ್ಲಿ ಎಂಬಿಎ ಪದವಿ ಪಡೆದರು. ಜೀವನ ಸಾಗಿಸಲು ಸೈಕಲ್ ಅಗರಬತ್ತಿಯಲ್ಲಿ 2 ವರ್ಷಗಳ ಕಾಲ ನೌಕರಿ ಮಾಡಿದರು. ಆದರೆ ರಾಜೀವ್ ದೀಕ್ಷಿತರು ಹೇಳುವಂತೆ ಸ್ವಾವಲಂಬಿ ಜೀವನ ನಡೆಸಲು ಸ್ವಂತ ಉದ್ಯೋಗ ಮಾಡಬೇಕೆಂದು ನಿಶ್ಚಯಿಸಿ ಊರಿನಲ್ಲಿ ತಮ್ಮದೇ ಕೃಷಿ ಸಲಹಾ ಕೇಂದ್ರ ಪ್ರಾರಂಭಿಸಿದರು. ರೈತರಿಗೆ ಉತ್ತಮವಾದ ಸಲಹೆಗಳು ದೊರೆಯುತ್ತಿತ್ತಾದರೂ ಮಲ್ಲಿನಾಥರಿಗೆ ಯಾವುದೇ ಆದಾಯ ಸಿಗುತ್ತಿರಲಿಲ್ಲ. ವ್ಯವಸಾಯ ಮಾಡೋಣವೆಂದರೆ ಇವರಿಗೆ ಪರಂಪರಾಗತವಾಗಿ ಬಂದ ಯಾವುದೇ ಕೃಷಿಭೂಮಿಯಿಲ್ಲ. ತಂದೆ ಸರ್ಕಾರಿ ಹೈಸ್ಕೂಲ್ ಶಿಕ್ಷಕರಾಗಿದ್ದರು. ತಾಯಿ ನೀಲಮ್ಮ ನವರು ಗೃಹಿಣಿ.

ಇಷ್ಟರಲ್ಲಿ ಮಹೇಶ್ವರಿ ಎಂಬವರೊಂದಿಗೆ ವಿವಾಹವಾಗುತ್ತದೆ. ಸಂಸಾರವನ್ನು ನಿಭಾಯಿಸಲು ಮತ್ತೆ ಕೆಲಸಕ್ಕೆ ಸೇರಬೇಕಾಗುತ್ತದೆ. ಗುಲ್ಬರ್ಗದ ಅಗ್ರಿಕಲ್ಚರ್ ರಿಸರ್ಚ್ ಸ್ಟೇಷನ್ ನ ಸಮಗ್ರ ಕೃಷಿ ಪದ್ಧತಿ ಪ್ರಾಜೆಕ್ಟಿನ ಮೇಲ್ವಿಚಾರಕರಾಗಿ ಉದ್ಯೋಗ ದೊರೆಯುತ್ತದೆ. ಇದರ ಜೊತೆಯಲ್ಲೇ ಕೃಷಿ ಸಲಹಾ ಕೇಂದ್ರವು ಮುಂದುವರೆಯುತ್ತದೆ. ಈ ಸಮಯದಲ್ಲಿ ರೈತರು ಹೇಳುತ್ತಿದ್ದ ಸಮಸ್ಯೆಗಳನ್ನು ಆಲಿಸಿ ಸಾವಯವ ಪದ್ಧತಿಯಲ್ಲಿ ಸೂಕ್ತ ಪರಿಹಾರಗಳನ್ನು ಕಂಡುಕೊಳ್ಳಲು ಹಲವು ಪ್ರಯೋಗಗಳನ್ನು ನಡೆಸುತ್ತಾರೆ.

ರಾಸಾಯನಿಕ ಮುಕ್ತ ಕೃಷಿಯಿಂದಷ್ಟೇ ರೈತರ ಏಳಿಗೆ ಸಾಧ್ಯವೆಂಬ

ಸತ್ಯ ಅರಿವಾಗುತ್ತದೆ. ದೊಡ್ಡಬಳ್ಳಾಪುರದ ನಾರಾಯಣ ರೆಡ್ಡಿ, ಮೈಸೂರಿನ ಇಂದ್ರಪ್ರಸ್ಥದ ಎಪಿ ಚಂದ್ರಶೇಖರ್, ಮಹಾರಾಷ್ಟ್ರದ ಸುಭಾಷ್ ಪಾಳೇಕರ್ ಸೇರಿದಂತೆ ಹಲವು ದಿಗ್ಗಜರನ್ನು ಭೇಟಿ ಮಾಡಿ ಅವರ ತೋಟಗಳಲ್ಲಿ ಕೆಲ ಕಾಲವಿದ್ದು ಎಷ್ಟು ಸಾಧ್ಯವೋ ಅಷ್ಟು ಅವರೊಂದಿಗೆ ಚರ್ಚೆಗಳನ್ನು ಮಾಡಿ ವಿಚಾರಗಳನ್ನು ತಿಳಿದುಕೊಳ್ಳುತ್ತಾರೆ. ಇದಿಷ್ಟೇ ಅಲ್ಲದೆ ಅವರುಗಳು ಬರೆದ ಪುಸ್ತಕಗಳನ್ನು ಖರೀದಿಸುತ್ತಾರೆ. ಮತ್ತೊಂದು ವಿಶೇಷ ಸಂಗತಿ ಏನೆಂದರೆ ಈ ದಿಗ್ಗಜರುಗಳು ತಾವು ಯಾವ ಪುಸ್ತಕಗಳನ್ನು ಓದಿರುವರು ಅವರಿಗೆ ಏನು ಪ್ರೇರಣೆಯಾಯಿತು ಅವರು ಈ ಮಟ್ಟಕ್ಕೆ ಹೇಗೆ ಬಂದರು ಎಂಬೆಲ್ಲ ಮಾಹಿತಿ ಕಲೆಹಾಕಿದರು.ಪುಸ್ತಕಗಳ ಓದು, ದಿಗ್ಗಜರೊಂದಿಗೆ ಚರ್ಚೆಗಳಿಂದ ಮಲ್ಲಿನಾಥರ ಜ್ಞಾನ ಹೆಚ್ಚಾಯಿತು. ತಮಗೆ ತಿಳಿದದ್ದನ್ನು ಇತರರೊಂದಿಗೆ ಹಂಚಿಕೊಳ್ಳಬೇಕೆಂಬ ಸದುದ್ದೇಶದಿಂದ ಪರಿಚಯಸ್ಥ ರೈತರಿಗೆ ಸಾವಯವ ಕೃಷಿಯ ಮಹತ್ವವನ್ನು ಹೇಳಲು ಪ್ರಾರಂಭಿಸಿದರು.




ನೋಡನೋಡುತ್ತಲೇ ಮಲ್ಲಿನಾಥರು ಅನೇಕ ಸಭೆ-ಸಮಾರಂಭಗಳಿಗೆ ಅತಿಥಿ ಉಪನ್ಯಾಸ ನೀಡಲು ಹೋಗುತ್ತಿದ್ದರು. ಹೀಗೆ ಒಮ್ಮೆ ಒಂದು ಹಳ್ಳಿಯ ಕಾರ್ಯಕ್ರಮದಲ್ಲಿ ಒಬ್ಬ ಹೆಣ್ಣುಮಗಳು ನೀವು ದೇಸಿ ಹಸುವನ್ನು ಸಾಕಬೇಕೆಂದು ಇಷ್ಟೊಂದು ಹೇಳುತ್ತಿದ್ದೀರಿ ಅಂದಹಾಗೆ ನೀವೆಷ್ಟು ಹಸುಗಳನ್ನು ಸಾಕುತ್ತಿದ್ದೀರಿ ಎಂದು ಪ್ರಶ್ನೆ ಮಾಡಿದಳು. ಮಲ್ಲಿನಾಥರಿಗೆ ಒಂದು ಕ್ಷಣ ದಿಗ್ಭ್ರಮೆಯಾಯಿತು. ಆ ಹೆಣ್ಣುಮಗಳು ಕೇಳಿದ ಪ್ರಶ್ನೆಗೆ ಅವರ ಬಳಿ ಉತ್ತರವಿರಲಿಲ್ಲ. ಏಕೆಂದರೆ ಇವರು ಮೂಲತಹ ಕೃಷಿಕರಲ್ಲ. ಹಸು ಸಾಕಿದ ಅನುಭವವಿಲ್ಲ. ಪರಿಚಯಸ್ಥ ರೈತರ ತೋಟಕ್ಕೆ ಹೋಗಿದ್ದು ಬಿಟ್ಟರೆ ಸ್ವತಃ ಕೃಷಿ ಮಾಡಿದ ಅನುಭವವಿಲ್ಲ.ಕೇವಲ ಪ್ರವಾಸ ಓದು ಇವುಗಳಿಂದ ವ್ಯವಸಾಯದ ವಿವಿಧ ಮಜಲುಗಳನ್ನು ತಿಳಿಯಲಾಗುವುದಿಲ್ಲ. ಸ್ವತಃ ಭೂಮಿಗಿಳಿದು ಕೈಕೆಸರು ಮಾಡಿಕೊಂಡಾಗಲೇ ಕೃಷಿ ಎಂದರೇನು ಎಂಬುದು ತಿಳಿಯುವುದು. ಈ ಸತ್ಯವನ್ನು ಅರಿತು ಮಲ್ಲಿನಾಥರು ಒಂದು ಹಸುವನ್ನು ಸಾಕಲೇಬೇಕೆಂದು ಮರುದಿನವೇ ಜವಾರಿ ತಳಿಯ ಹಸುವನ್ನು ಕೊಂಡು ಮನೆಗೆ ತಂದರು. ತಂದೆಯ ಪೆನ್ಷನ್ ಹಣ ಮತ್ತು ತಮ್ಮ ಸ್ವಂತ ಉಳಿತಾಯದ ಹಣದಿಂದ ಗುಲ್ಬರ್ಗದಿಂದ 20 ಕಿಲೋಮೀಟರ್ ದೂರದಲ್ಲಿರುವ ಕೆರಿಅಂಬಲಗಾ ಗ್ರಾಮದಲ್ಲಿ ಸುಮಾರು ಏಳು ಎಕರೆ ಜಮೀನನ್ನು ಖರೀದಿಸುತ್ತಾರೆ.



ಇತ್ತ ಅಗ್ರಿಕಲ್ಚರ್ ರಿಸರ್ಚ್ ಸ್ಟೇಷನ್‌ನಲ್ಲಿ ಪ್ರಾಜೆಕ್ಟ್ ಮುಗಿಯುತ್ತದೆ. ನಂತರ ಗುಲ್ಬರ್ಗದ ಡೈರಿ ಸೈನ್ಸ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಳ್ಳುತ್ತಾರೆ. ವಿದ್ಯಾರ್ಥಿಗಳಿಗೆ ಬೋಧಿಸುತ್ತಾ ಬಿಡುವಿನ ಸಮಯದಲ್ಲಿ ತಮ್ಮ ಜಮೀನಿನಲ್ಲಿ ಸಾವಯವ ಕೃಷಿಯನ್ನು ಪ್ರಾರಂಭಿಸುತ್ತಾರೆ. ಮಳೆ ಆಶ್ರಯದಲ್ಲಿ ತೊಗರಿ, ಉದ್ದು, ಅಲಸಂದೆ, ಕೆಲ ಬಗೆಯ ಸಿರಿಧಾನ್ಯಗಳನ್ನು ಬೆಳೆದು ಯಶಸ್ವಿಯಾಗುತ್ತಾರೆ. ಒಮ್ಮೆ ಮಳೆಯಾಶ್ರಯದಲ್ಲಿ ಭತ್ತವನ್ನು ಬೆಳೆಯಲು ಹೋಗಿ ಕೈ ಸುಟ್ಟುಕೊಂಡು ನಷ್ಟ ಅನುಭವಿಸುತ್ತಾರೆ.

ಮಲ್ಲಿನಾಥರು ಬೋಧಕವೃತ್ತಿ ಯಲ್ಲಿರುವ ಕಾರಣ ಅವರು ಮಾಡುವ ಪ್ರತಿ ಕೆಲಸವನ್ನು ದಾಖಲಿಸುವ ಅಭ್ಯಾಸವನ್ನು ಬೆಳೆಸಿಕೊಂಡಿದ್ದಾರೆ. ರಾಸಾಯನಿಕಗಳನ್ನು ಬಳಸದೇ ವ್ಯವಸಾಯ ಮಾಡುವಾಗ ಕೀಟ ಮತ್ತು ಹಾನಿಕಾರಕ ರೋಗಾಣುಗಳಿಂದ ಬೆಳೆಗೆ ಅನೇಕ ತೊಂದರೆಗಳು ಎದುರಾಗುತ್ತವೆ. ಆಯಾ ಸಂದರ್ಭದಲ್ಲಿ ಆಯಾ ಸಮಸ್ಯೆಗಳಿಗೆ ಸಾವಯವ ರೀತಿಯಲ್ಲಿ ಕಂಡುಕೊಂಡ ಪರಿಹಾರಗಳನ್ನು ಲಿಖಿತ ರೂಪದಲ್ಲಿ ಟಿಪ್ಪಣಿ ಮಾಡಿಕೊಂಡಿದ್ದಾರೆ. ಸಾವಯವ ರೀತಿಯಲ್ಲಿ ಗೊಬ್ಬರ ನಿರ್ವಹಣೆ, ಅಂದರೆ ಆಕಳಿನ ಗಂಜಲದಿಂದ ಯುರಿಯಾ ತಯಾರಿಕೆ, ಸಗಣಿ ಗಂಜಲ ಮತ್ತಿತರ ವಸ್ತುಗಳನ್ನು ಬಳಸಿಕೊಂಡು ಗಿಡಗಳಿಗೆ ಬೇಕಾದ ರಂಜಕ, ಪೊಟ್ಯಾಶ್ ಸೇರಿದಂತೆ ಸೂಕ್ಷ್ಮ ಪೋಷಕಾಂಶಗಳನ್ನು ಮನೆಯಲ್ಲೇ ತಯಾರಿಸುವ ವಿಧಾನವನ್ನು ಅರಿಯುತ್ತಾರೆ. ರೋಗ ಮತ್ತು ಕೀಟಗಳ ನಿರ್ವಹಣೆಗೂ ಮಲ್ಲಿನಾಥರು ಸಾಕಷ್ಟು ಪ್ರಯೋಗಗಳನ್ನು ನಡೆಸಿದ್ದಾರೆ. ಸಾವಯವ ಕೃಷಿಯ ದಿಗ್ಗಜರಿಂದ ಮತ್ತು ಪುಸ್ತಕಗಳಿಂದ ಪಡೆದ ಜ್ಞಾನದಿಂದ ಅನೇಕ ಪ್ರಯೋಗಗಳನ್ನು ನಡೆಸಿ ಅದರಲ್ಲಿ ಯಾವುದು ಪ್ರಯೋಜನಕಾರಿಯಾಗುತ್ತದೆ ಅಂಥವುಗಳನ್ನು ದಾಖಲಿಸಿದ್ದಾರೆ. ಈ ಎಲ್ಲ ಮಾಹಿತಿಗಳನ್ನು ಒಂದೆಡೆ ಕಲೆಹಾಕಿ ಅದಕ್ಕೆ ಪುಸ್ತಕ ರೂಪವನ್ನು ಕೊಟ್ಟು ಗೋಪಾಲ್ಸ್ ತಂಡದ ವತಿಯಿಂದ ಕನ್ನಡ, ಆಂಗ್ಲ ಮತ್ತು ಇತ್ತೀಚೆಗಷ್ಟೇ ಹಿಂದಿ ಭಾಷೆಯಲ್ಲಿ ಪ್ರಕಟಗೊಂಡಿದೆ. ಈ ಹಿಂದೆ ಇದೇ ಅಂಕಣದಲ್ಲಿ ಈ ಪುಸ್ತಕದ ಕುರಿತಾಗಿಯೂ ವಿವರಣೆ ನೀಡಲಾಗಿತ್ತು. ಸಂತಸದ ಸಂಗತಿಯೆಂದರೆ ಕನ್ನಡ ಅವತರಣಿಕೆಯ ಮೂರು ಮುದ್ರಣಗಳಲ್ಲಿ ಪ್ರಕಟಗೊಂಡ ಅಷ್ಟೂ ಪುಸ್ತಕಗಳು ಮಾರಾಟವಾಗಿ ನಾಲ್ಕನೇ ಆವೃತ್ತಿಗೆ ಸಜ್ಜಾಗುತ್ತಿದೆ. ಇನ್ನು ಇಂಗ್ಲಿಷ್ನಲ್ಲಿ ಮೊದಲ ಆವೃತ್ತಿಯ ಬಹುತೇಕ ಎಲ್ಲ ಪುಸ್ತಕಗಳು ಮಾರಾಟವಾಗಿದೆ. ಕೇವಲ ಮಾರಾಟ ಅಷ್ಟೇ ಅಲ್ಲದೆ ಅನೇಕ ರೈತರು ಇದರಲ್ಲಿ ನೀಡಿರುವ ಮಾಹಿತಿಯಿಂದ ಪ್ರೇರಣೆಗೊಂಡು ತಮ್ಮ ಜಮೀನಿನಲ್ಲಿ ಹಲವು ಪ್ರಯೋಗಗಳನ್ನು ನಡೆಸಿದ್ದಾರೆ.ಇಷ್ಟಕ್ಕೆ ಸುಮ್ಮನಾಗದೆ ಮಲ್ಲಿನಾಥರು ಗೋಪಾಲ್ಸ್ ತಂಡದ ಸಹಯೋಗದೊಂದಿಗೆ ತಮ್ಮ ಜಮೀನಿನಲ್ಲಿ ಸಾವಯವ ಕೃಷಿಗೆ ಬೇಕಾದಂತಹ ವಿವಿಧ ಸಾಮಗ್ರಿಗಳ ಉತ್ಪಾದನಾ ಘಟಕವನ್ನು ಪ್ರಾರಂಭಿಸಿದ್ದಾರೆ.

**ಮುಂದುವರೆಯುತ್ತದೆ...**